ಹಳ್ಳಿಗಳಲ್ಲಿ ಹಳೆಯದಾಗಿರುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ನಾನು ಪದೇ ಪದೇ Executive Engineer ಮತ್ತು AEE ಗಳಿಗೆ ಹೇಳಿದರೂ ಕೂಡ ಬದಲಾವಣೆ ಮಾಡಿಲ್ಲ.

ಅಧ್ಯಕ್ಷರು: ಈಗ ಏನು ಮಾಡಬೇಕೆಂದು ಹೇಳಿ. ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲ.

ಡಾ: ಕೆ. ಶ್ರೀನಿವಾಸಮೂರ್ತಿ: ಇನ್ನೂ ಹೇಳಿಲ್ಲ ಅಧ್ಯಕ್ಷರೆ,

ಅಧ್ಯಕ್ಷರು: ಇಲ್ಲಿ ಇದೆಯಲ್ಲ ಇದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳಲ್ಲಿ ಶಿಥಿಲಗೊಂಡ ಕಬ್ಬಿಣದ ಕಂಬಗಳನ್ನು ಬದಲಾವಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಶ್ರೀ ಡಿ. ಕೆ. ಶಿವಕುಮಾರ್: ಎಷ್ಟು ದಿವಸಗಳಲ್ಲಿ ಆಗಬೇಕು ಹೇಳಿ, ಆದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ ಆಗಬೇಕು?

ಡಾ: ಕೆ. ಶ್ರೀನಿವಾಸಮೂರ್ತಿ: 15 ದಿವಸಗಳಲ್ಲಿ ಮಾಡಿ ಕೊಡಿ.

ಶ್ರೀ ಡಿ. ಕೆ. ಶಿವಕುಮಾರ್: ಒಂದೆರಡು ತಿಂಗಳುಗಳಲ್ಲಿ ಮಾಡಿ ಕೊಡುತ್ತೇನೆ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀಮತಿ ಶಾರದ ಪೂರ್ಯನಾಯಕ್: ನನ್ನದು ಒಂದು ಪ್ರಶ್ನೆ ಇತ್ತು.

ಅಧ್ಯಕ್ಷರು: No Question. ಎರಡು ಸಾರಿ ಕೂಗಿ ಆಯಿತು. ನೀರು ಇರಲಿಲ್ಲ. ಆಗಿ ಹೋಯಿತು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಟಿ. ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 11.07.2014ರ ಹದಿನೈದನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 145 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.